ಅ. ಶಾಲಾ ಮಕ್ಕಳಿಗೆ ಸೈಕಲ್ ವಿತರಣೆಗಾಗಿ 2008–09ರ ಸಾಲಿಗೆ ನಿಗದಿಪಡಿಸಲಾದ ಮೊತ್ತ ಎಷ್ಟು;

ಶಾಲಾ ಮಕ್ಕಳಿಗೆ ಸೈಕಲ್ ವಿತರಣೆಗಾಗಿ 2008–09ರ ಸಾಲಿಗೆ 140.00ಕೋಟಿರೂಗಳನ್ನು ಒದಗಿಸಲಾಗಿದೆ.

ಆ. ಸೈಕಲ್ ಪೂರೈಸಲು ಯಾವ ಯಾವ ಕಂಪೆನಿಗಳಿಗೆ ಗುತ್ತಿಗೆ ನೀಡಲಾಗಿದೆ.

ಸೈಕಲ್ ಪೂರೈಸಲು ಮೆ:ಅಟ್ಲಾಸ್ ಸೈಕಲ್ಸ್(ಹ) ಲಿ., ಮಧ್ಯಪ್ರದೇಶ, ಟಿ.ಐ.ಸೈಕಲ್ಸ್ ಆಫ್ ಇಂಡಿಯಾ, ಚೆನ್ನೈ, ಹೀರೋ ಸೈಕಲ್ಸ್ ಲಿ., ಲೂಧಿಯಾನ ಮತ್ತು ಏವನ್ ಸೈಕಲ್ಸ್ ಲಿ., ಲೂಧಿಯಾನ. ಕಂಪೆನಿಗಳಿಗೆ ಗುತ್ತಿಗೆ ನೀಡಲಾಗಿದೆ.

ಇ. ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಸೈಕಲ್‌ಗಳ ಗುಣಮಟ್ಟಕ್ಕೆ ಸರಿಸಮಾನವಾದವುಗಳಾಗಿವೆಯೇ;

ಬೈಸಿಕಲ್‌ಗಳ ಗುಣಮಟ್ಟವನ್ನು ಭಾರತೀಯ ಗುಣಮಟ್ಟ ಮಾಪನದಲ್ಲಿ ನಿಗಧಿಗೊಳಿಸಿರುವಂತೆ ಕಾಯ್ದುಕೊಳ್ಳಲಾಗಿದೆ.

ಈ. ಹಾಗೆ ಪೂರೈಸಲಾಗುತ್ತಿರುವ ಪ್ರತಿ ಸೈಕಲ್‌ನ ಬೆಲೆ ಎಷ್ಟು;

ಪ್ರತಿ ಬೈಸಿಕಲ್‌ನ ದರ ರೂ.2397/–ಕ್ಕೆ ನಿಗಧಿಗೊಳಿಸಿದೆ.

ಉ. 2008–09ನೇ ಸಾಲಿನಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿರುವ ಏಳು ಲಕ್ಷ ವಿದ್ಯಾರ್ಥಿಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಸೈಕಲ್ ನೀಡಲಾಗಿದೆ?

2008–09ನೇ ಸಾಲಿನಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ಈವರೆಗೆ 1,82,102 ವಿದ್ಯಾರ್ಥಿಗಳಿಗೆ ಬೈಸಿಕಲ್‌ಗಳನ್ನು ವಿತರಿಸಲಾಗಿದೆ.

ಇಡಿ:49: ಯೋಯೋಕ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

171 ಶ್ರೀ ಧ್ರುವನಾರಾಯಣ್ ಆರ್. (ಕೊಳ್ಳೇಗಾಲ)

ಇಂಧನ ಸಚಿವರು.

****

ಅ) ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು;

ಆ) ಅದಕ್ಕೆ ತಗಲುತ್ತಿರುವ ಉತ್ಪಾದನಾ ವೆಚ್ಚ ಎಷ್ಟು;

2007–08ನೇ ಸಾಲಿನಲ್ಲಿ ರಾಜ್ಯದ ಆಂತರಿಕ ವಿದ್ಯುತ್ ಉತ್ಪಾದನೆಯಿಂದ ಲಭ್ಯವಾದ 29,258 ದಶಲಕ್ಷ ಯೂನಿಟ್ಟುಗಳೂ ಸೇರಿದಂತೆ ವಿವಿಧ ಮೂಲಗಳಿಂದ ರಾಜ್ಯಕ್ಕೆ ಲಭ್ಯವಾದ ವಿದ್ಯುತ್ತಿನ ಒಟ್ಟು ಪ್ರಮಾಣ 40,195 ದಶಲಕ್ಷ ಯೂನಿಟ್ಟುಗಳು. ಇದಕ್ಕೆ ತಗುಲಿದ ವೆಚ್ಚವು 7885.20 ಕೋಟಿ ರೂ.ಗಳು.

ಇ) ರಾಜ್ಯದಲ್ಲಿ ಪ್ರಸ್ತುತ ಎಷ್ಟು ಮೆಗಾವ್ಯಾಟ್ ವಿದ್ಯುಚ್ಛಕ್ತಿಯ ಕೊರತೆ ಇದೆ;

ಪ್ರಸಕ್ತ ಸಾಲಿನಲ್ಲಿ (2008–09) ಸುಮಾರು 2000 ದಿಂದ 2500 ಮೆಗಾವ್ಯಾಟ್‌ಗಳಷ್ಟು ದಿನದ ಗರಿಷ್ಠ ಬೇಡಿಕೆಯಲ್ಲಿ ಕೊರತೆ ಇದೆ.

ಈ) ಕೊರತೆ ನೀಗಿಸಿಕೊಳ್ಳಲು ಕೈಗೊಂಡ ಕ್ರಮಗಳೇನು?

ವಿದ್ಯುತ್ ಕೊರತೆಯನ್ನು ನಿವಾರಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಅಲ್ಪಾವಧಿ ಕ್ರಮಗಳು:

1. ರಾಜ್ಯದ ಎಲ್ಲಾ ಖಾಸಗಿ ವಿದ್ಯುತ್ ಉತ್ಪಾದಕರುಗಳಿಗೆ, 30–12–2008ರ ಸರ್ಕಾರಿ ಆದೇಶದ ಪ್ರಕಾರ ಗರಿಷ್ಠ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯನ್ನು ಮಾಡಿ ರಾಜ್ಯದ ವಿದ್ಯುತ್ ಜಾಲಕ್ಕೆ ನೀಡಲು ಸೂಚಿಸಿದೆ.
2. ಮೆ:ಜೆ.ಎಸ್. ಡಬ್ಲ್ಯೂ ಮತ್ತು ಮೆ : ಜಿ.ಎಂ.ಆರ್. ರವರಿಂದ ಮೇ 2009ರ ಅಂತ್ಯದವರೆಗೆ ದಿನವಹಿ 400 ಮೆಗಾ ವ್ಯಾಟ್ ಗಳಷ್ಟು (9.60 ದಶಲಕ್ಷ ಯೂನಿಟ್ಟುಗಳು) ರಾಜ್ಯದ ವಿದ್ಯುತ್ ಜಾಲಕ್ಕೆ ಪೂರೈಸಲು ಕ್ರಮಕೈಗೊಳ್ಳಲಾಗುತ್ತಿದೆ.
3. ಅಸಂಪ್ರದಾಯಕ ವಿದ್ಯುತ್ ಉತ್ಪಾದನಾ ಮೂಲಗಳಿಂದ ಹೆಚ್ಚುವರಿಯಾಗಿ ದಿನವಹಿ ಸರಾಸರಿ 5 ರಿಂದ 6 ದಶಲಕ್ಷ ಯೂನಿಟ್ ವಿದ್ಯುತ್‌ನ್ನು ಪಡೆಯಲಾಗುತ್ತಿದೆ.
4. ಫೆಬ್ರವರಿ 2009 ರ ಅಂತ್ಯದ ವರೆಗೆ ಛತ್ತೀಸ್ ಘಡದಿಂದ 200 ಮೆಗಾ ವ್ಯಾಟ್‌ಗಳಷ್ಟು ವಿದ್ಯುತ್ತನ್ನು ಪಡೆಯಲಾಗುತ್ತಿದೆ.
5. ಇಂಡಿಯನ್ ಎನರ್ಜಿ ಎಕ್ಸ್ಚೇಂಜ್ ಮೂಲಕ ಒಂದು ದಿನ ಮುಂಚಿತ ಆಧಾರದಲ್ಲಿ (On day ahead basis) ವಿದ್ಯುತ್ತನ್ನು ಪಡೆಯಲಾಗುತ್ತಿದೆ. ಜನವರಿ 09 ರಿಂದ 20–2–09 ರವರೆಗೆ 21.165 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ತನ್ನು ಖರೀದಿಸಲಾಗಿರುತ್ತದೆ.

ಮಧ್ಯಮಾವಧಿ ಕ್ರಮಗಳು:

ಮೆ : ವಿ.ಬಿ.ಸಿ. ಫೆರೋ ಅಲಾಯ್ಸಿ ಸಂಸ್ಥೆಯಿಂದ 600 ಮೆಗಾ ವ್ಯಾಟ್‌ಗಳಷ್ಟು ವಿದ್ಯುತ್ತನ್ನು ಹಂತ ಹಂತವಾಗಿ ಪಡೆಯಲು ಇಂಗಿತ ಪತ್ರ (LOI) ವನ್ನು ನೀಡಲಾಗಿರುತ್ತದೆ.

ದೀರ್ಘಕಾಲಿಕ ಕ್ರಮಗಳು:

ಸ್ಪರ್ಧಾತ್ಮಕ ಬಿಡ್ ಮೂಲಕ (ರಾಜ್ಯದಲ್ಲಿ):

1. 1320 ಮೆಗಾವ್ಯಾಟ್ ಶಾಖೋತ್ಪನ್ನ ಘಟಕ– ಗುಲ್ಬರ್ಗಾದಲ್ಲಿ 12ನೇ ಯೋಜನಾವಧಿಯಲ್ಲಿ ಕಾರ್ಯಾರಂಭ ಅಂದಾಜಿಸಲಾಗಿದೆ.
2. 1320 ಮೆಗಾವ್ಯಾಟ್ ಶಾಖೋತ್ಪನ್ನ ಘಟಕ – ಘಟಪ್ರಭಾದಲ್ಲಿ 12 ನೇ ಯೋಜನಾವಧಿಯಲ್ಲಿ ಕಾರ್ಯರಂಭ ಅಂದಾಜಿಸಲಾಗಿದೆ.

<u>ಕರ್ನಾಟಕ ವಿಧಾನ ಸಭೆ</u>

172 ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ)
ಇಂಧನ ಸಚಿವರು.

****

ಅ) ಸಾಗರ ತಾಲ್ಲೂಕು ಜೋಗದಲ್ಲಿರುವ ಶರಾವತಿ ವಿದ್ಯುತ್ ಯೋಜನೆಯಿಂದ ನೂರಾರು ಕೋಟಿ ರೂ.ಗಳ ಆದಾಯ ಬರುತ್ತಿದ್ದು ಹಾಗೂ ನಾಡಿಗೆ ಬೆಳಕು ನೀಡುತ್ತಿರುವುದು ನಿಜವಲ್ಲವೇ;

ಅ) ಶರಾವತಿ ಜಲ ವಿದ್ಯುತ್ ಯೋಜನೆಯಿಂದ ಕರ್ನಾಟಕ ರಾಜ್ಯಕ್ಕೆ ವಿದ್ಯುತ್ ಸರಬರಾಜಾಗುತ್ತಿದ್ದು, ಈ ಯೋಜನೆ ಕರ್ನಾಟಕದ ಬಹುಮುಖ್ಯವಾದ ವಿದ್ಯುತ್ ಉತ್ಪಾದನಾ ಕೇಂದ್ರವಾಗಿರುವುದು ಹೆಮ್ಮೆಯ ವಿಷಯವಾಗಿದೆ. ಈ ಯೋಜನೆಯಡಿ ಉತ್ಪಾದಿಸಲಾಗುವ ವಿದ್ಯುಚ್ಛಕ್ತಿಯ ಜೊತೆಗೆ ರಾಜ್ಯದ ಇತರ ಭಾಗಗಳಾದ ರಾಯಚೂರು, ಬಳ್ಳಾರಿ, ನಾಗಝರಿ (ಕಾಳಿ ಯೋಜನೆ), ವರಾಹಿ, ಆಲಮಟ್ಟಿ ಇತ್ಯಾದಿ ಹಾಗೂ ಕೇಂದ್ರ ಸರ್ಕಾರದ ಯೋಜನೆಯಾದ ಕೈಗಾ ಅಣು ವಿದ್ಯುತ್ ಸ್ಥಾವರದಿಂದ ಉತ್ಪಾದಿಸಲಾಗುತ್ತಿರುವ ವಿದ್ಯುತ್ ಹಾಗೂ ಕೇಂದ್ರ ಯೋಜನೆಗಳಿಂದ ಲಭ್ಯವಾಗುವ ರಾಜ್ಯದ ಪಾಲು ಹಾಗೂ ಖಾಸಗಿ ವಿದ್ಯುತ್ ಉತ್ಪಾದಕರಿಂದ ಪಡೆಯುವ ವಿದ್ಯುತ್ತ್ತನ್ನು ಕ್ರೋಢೀಕರಿಸಿ, ಲಭ್ಯತೆ ಹಾಗೂ ಬೇಡಿಕೆಗೆ ಅನುಗುಣವಾಗಿ ರಾಜ್ಯದ ಎಲ್ಲಾ ಭಾಗಗಳಿಗೆ ಕರ್ನಾಟಕ ಸರ್ಕಾರವು ವಿದ್ಯುತ್ ಸರಬರಾಜು ಕಂಪನಿವಾರು ಹಂಚಿರುತ್ತದೆ. ಈ ಹಂಚಿಕೆಯ ಪ್ರಕಾರ ವಿದ್ಯುತ್ ಸರಬರಾಜು ಮಾಡಲಾಗುತ್ತದೆ.